ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬೈಂದೂರು
ಇಲ್ಲಿರುವ ಉಪನ್ಯಾಸಕರ ಕೊರತೆ ವಿವರ:

1. ರಾಜ್ಯಶಾಸ್ತ್ರ	- 01
2. ವಾಣಿಜ್ಯಶಾಸ್ತ್ರ	- 01

: - :

ಬೈಂದೂರು ಕ್ಷೇತ್ರದ ಸರ್ಕಾರಿ ಪದವಿ ಪೂರ್ವ
ಕಾಲೇಜುಗಳಲ್ಲಿ ಶಿಕ್ಷಕರ ಕೊರತೆ ವಿವರ:

ಬೈಂದೂರು	ನಾವುಂದ	ವಂಡ್ಸೆ	ಉಪ್ಪುಂದ	ಕಂಬದ ಕೋಣೆ
ಇತಿಹಾಸ	ಇತಿಹಾಸ	ಇಂಗ್ಲಿಷ್	ಕನ್ನಡ	-
ಅರ್ಥಶಾಸ್ತ್ರ	ಜೀವಶಾಸ್ತ್ರ	ವಾಣಿಜ್ಯ	ಇಂಗ್ಲಿಷ್	-
ಸಮಾಜಶಾಸ್ತ್ರ	-	-	ಇತಿಹಾಸ	-
-	-	-	ಸಮಾಜಶಾಸ್ತ್ರ	-

ಬೈಂದೂರು ಕ್ಷೇತ್ರದಲ್ಲಿ ಪ್ರೌಢಶಾಲೆಗಳ ಮಂಜೂರಾತಿ

1943 (2604) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಉಡುಪಿ ಜಿಲ್ಲೆಯ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಪ್ರೌಢಶಾಲೆಯನ್ನು ತೆರೆಯುವ ಅಗತ್ಯವಿದ್ದು ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗುವುದೆ;

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಹೆಚ್.ಎಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು. ವಿಧಾನಸಭಾ ಕ್ಷೇತ್ರಗಳಲ್ಲಿ ಈ ಕೆಳಗಿನಂತೆ ಪ್ರೌಢಶಾಲೆಗಳನ್ನು ತೆರೆಯಲಾಗಿದೆ:

1)	ಸರ್ಕಾರಿ ಪ್ರೌಢಶಾಲೆಗಳು	- 11
2)	ಅನುದಾನಿತ ಪ್ರೌಢಶಾಲೆಗಳು	- 04
3)	ಅನುದಾನರಹಿತ ಪ್ರೌಢಶಾಲೆಗಳು	- 07
	ಒಟ್ಟು	22

ಆ) ಉದ್ಭವಿಸುವುದಿಲ್ಲ.

ಶಿಕ್ಷಕರ ನೇಮಕಾತಿಯಲ್ಲಿ ಪರಿಶಿಷ್ಟವರ್ಗ / ಪಂಗಡ ಮೀಸಲಾತಿ

1944 (2605) ಶ್ರೀ ಗೋಪಾಲ ಪೂಜಾರಿ ಕೆ. (ಬ್ರೈಂದೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿಕ್ಷಕರ ನೇಮಕಾತಿಯಲ್ಲಿ ಪರಿಶಿಷ್ಟ ವರ್ಗ ಪರಿಶಿಷ್ಟ ಪಂಗಡಗಳಿಗೆ ಎಷ್ಟು ಮೀಸಲಾತಿಯನ್ನು ನೀಡಲಾಗಿದೆ;

ಆ) ಈ ಪರಿಶಿಷ್ಟ ವರ್ಗ : ಪಂಗಡಗಳ ಮೀಸಲಾತಿ ನೀಡಿದ್ದು ಹುದ್ದೆಗಳು ತುಂಬಲ್ಪಟ್ಟಿದೆಯೆ;

ಇ) ವಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಈ) ತರಬೇತಿ ಹೊಂದಿಲ್ಲದ ಮೆಟ್ರಿಕ್ಯುಲೇಷನ್ ಪದವಿ ಪೂರ್ವ :: ಪದವಿ ಪಡೆದ ಪರಿಶಿಷ್ಟ ಜಾತಿ : ಪಂಗಡದ ವಿದ್ಯಾರ್ಥಿಗಳಿಗೆ ಶಿಕ್ಷಕರಾಗಿ ನೇಮಕಾತಿ ಮಾಡಲಾಗುವುದೆ?

ಶ್ರೀ ಹೆಚ್.ಎಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಪರಿಶಿಷ್ಟ ಜಾತಿಯವರಿಗೆ ಶೇಕಡ 15 ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇಕಡ 8

ಆ) ಹೌದು. ನೇಮಕಾತಿ ಸಮಯದಲ್ಲಿ ಈ ಗುಂಪುಗಳಿಗೆ ಸೇರಿದ ಅರ್ಹ ಅಭ್ಯರ್ಥಿಗಳಿಲ್ಲದೆ, ಭರ್ತಿಯಾಗದೆ ಉಳಿದ ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ಮುಂದಿನ ನೇಮಕಾತಿಗಳಲ್ಲಿ ಪ್ರಕಟಿಸಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಆದಾಗ್ಯೂ, ಕಳೆದ ನೇಮಕಾತಿ ನಂತರ, ಬ್ಯಾಕ್‌ಲಾಗ್ ಆಗಿ ಉಳಿದಿರುವ ಹುದ್ದೆಗಳ ವಿವರವು ಹೀಗಿದೆ:-

	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
ಪ್ರೌಢಶಾಲಾ ಶಿಕ್ಷಕರು	80	14
ಪ್ರಾಥಮಿಕ ಶಾಲಾ ಶಿಕ್ಷಕರು	1321	200

ಈ) ಪ್ರಾಥಮಿಕ ಶಾಲಾ ಹಾಗೂ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳಿಗೆ ನಿಗದಿಪಡಿಸುವ ವಿದ್ಯಾರ್ಹತೆ ಇಲ್ಲದವರನ್ನು ನೇಮಕ ಮಾಡಲು ನೇಮಕಾತಿ ನಿಯಮಗಳಲ್ಲಿ ಅವಕಾಶವಿಲ್ಲ.